(ಇಂದು ದಿನಾಂಕ 01-10-2021 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲು – ವಾದಿ ಪರ ಶ್ರೀ ಎಸ್.ಎಂ.ಎಸ್. ವಕೀಲರಿಂದ–**

ಅನಂತ ಗಣಪಯ್ಯ ಹರಿಕಂತ್ರ ಇವರ ವಿರುದ್ಧ ಈ ದಾವೆಗೂ ಪೂರ್ವದಲ್ಲಿ ನಾನು ಮತ್ತು ನನ್ನ ತಾಯಿಯವರು ಸೇರಿ ದಾವೆಯನ್ನು ಹೂಡಿದ್ದೆವು. ಸಾಕ್ಷಿಗೆ ಅಸಲು ದಾವಾ ಸಂಖ್ಯೆ 24/2020 ರ ವಾದಪತ್ರದ ದೃಢೀಕೃತ ಪ್ರತಿಯನ್ನು ತೋರಿಸಲಾಗಿ, ಸದರಿ ಪ್ರತಿ ಮಂಜುನಾಥ ಅನಂತ ಹರಿಕಾಂತ ಇವರು ನನ್ನ ವಿರುದ್ಧ ಸಲ್ಲಿಸಿದ ದಾವೆ ಆಗಿರುತ್ತದೆ ಎಂದು ಒಪ್ಪಿದ್ದು, ಸದರಿ ದಾಖಲಾತಿಯನ್ನು ನಿ.ಪಿ. 16 ಎಂದು ಗುರುತಿಸಲಾಯಿತು. ಸದರಿ ದಾವೆಯಲ್ಲಿ ನಾನು ಸಲ್ಲಿಸಿರುವ ಉದಾಹರಣೆಯನ್ನು ಪ್ರಸ್ತುತ ದಾವೆಯಲ್ಲಿ ಇರುವ ವಕೀಲರಿಗೆ ನೀಡಿರುವುದಿಲ್ಲ. ಅಸಲು ದಾವಾ ಸಂಖ್ಯೆ 24/2020 ನ್ನು ನನ್ನ ವಿರುದ್ಧ ದಾಖಲಿಸಿದ ನಂತರ ಅದರಲ್ಲಿ ತಿಳಿಸಿರುವಂತೆ ಮಂಜುನಾಥ ಅನಂತ ಹರಿಕಾಂತ ಇವರ ಹೆಸರಿಗೆ 0-3-0 ಸ್ವತ್ತು ರಾಜಿ ಡಿಕ್ರಿಯಿಂದ ಪ್ರಾಪ್ತಿ ಆಗಿದೆಯೋ ಇಲ್ಲವೋ ಎಂಬ ಬಗ್ಗೆ ನಾನು ಪರಿಶೀಲನೆ ಮಾಡಿರುವುದಿಲ್ಲ. ಅನಂತ ಗಣಪಯ್ಯ ಹರಿಕಾಂತ ಇವರು ಮಂಜುನಾಥ ಅನಂತ ಹರಿಕಾಂತ ಇವರಿಗೆ 0-3-0 ಕ್ಷೇತ್ರವನ್ನು ದಾವಾ ಸರ್ವೆ ನಂಬರನಲ್ಲಿ ಬಿಟ್ಟುಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ.

ಅನಂತ ಗಣಪಯ್ಯ ಹರಿಕಾಂತ ಇವರು ದಿನಾಂಕ 26-04-2010 ರಂದು ಮೃತಪಟ್ಟಿರುತ್ತಾರೆ. ವಾದಿಯಾಗಲೀ ಅಥವಾ ಮಂಜುನಾಥ ಅನಂತ ಹರಿಕಾಂತ ಆಗಲೀ ಅನಂತ ಗಣಪಯ್ಯ ಹರಿಕಾಂತರವರೊಂದಿಗೆ ವಾಸವಿರಲಿಲ್ಲ, ಅನಂತ ಗಣಪಯ್ಯ ಹರಿಕಾಂತ ಇವರು ನನ್ನ ಮನೆಯಲ್ಲಿ ಇದ್ದರು. ಅನಂತ ಗಣಪಯ್ಯ ಹರಿಕಾಂತ ಇವರು ಮೃತರಾದ ನಂತರ ಅವರ ಮರಣ ಪ್ರಮಾಣಪತ್ರವನ್ನು ನಾನು ಪಡೆದುಕೊಂಡಿರುತ್ತೇನೆ. ಅದನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ಮನೆ ನಂ. 102 ರಲ್ಲಿ ಅನಂತ ಗಣಪಯ್ಯ ಹರಿಕಾಂತ ಇವರು ತಮ್ಮ ಜೀವಿತ ಕಾಲದಲ್ಲಿ ವಾದಿಯೊಂದಿಗೆ ಉಳಿದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ವಾದಿಯು ಮನೆ ನಂ. 102 ರಲ್ಲಿ

ಸುಮಾರು 15 ವರ್ಷಗಳಿಂದ ವಾಸ ಮಾಡಿಕೊಂಡು ಬಂದಿರುತ್ತಾರೆ. ಅನಂತ ಗಣಪಯ್ಯ ಹರಿಕಾಂತ ಇವರು ಮೃತರಾದ ನಂತರ ವಾದಿಯನ್ನು ಮನೆಯಿಂದ ಹೋಗುವಂತೆ ಕೋರಿ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ.

ಅನಂತ ಗಣಪಯ್ಯ ಹರಿಕಾಂತರವರು ಮೃತರಾದ ಸುಮಾರು 4 ವರ್ಷಗಳ ನಂತರ ಅವರು ಮರಣ ಶಾಸನವನ್ನು ಬರೆದಿರುವ ವಿಚಾರವು ರವಿ ಗಿರಿಯನ್ ಎಂಬುವವರ ಮೂಲಕ ತಿಳಿದು ಬಂದಿರುತ್ತದೆ. ಸದರಿ ವಿಲ್‌ನಾಮೆ ನನ್ನ ಬಳಿಯೇ ಇತ್ತು. ನಾನು ಹೇಳುವಂತೆ ಅನಂತ ಗಣಪಯ್ಯ ಹರಿಕಾಂತ ಇವರು ಯಾವುದೇ ಮರಣಶಾಸನವನ್ನು ಮಾಡಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಮರಣ ಶಾಸನವು ನಾನು ಸೃಷ್ಟಿಸಿಕೊಂಡಿರುವಂತಹ ದಾಖಲಾತಿ ಆಗಿರುತ್ತದೆ ಎಂದರೆ ಸರಿಯಲ್ಲ. ನನಗೆ ರವಿ ಗಿರಿಯನ್ ಎಂಬುವವರು ಮರಣ ಶಾಸನದ ವಿಚಾರವನ್ನು ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಜೊತೆ ಅನಂತ ಗಣಪಯ್ಯ ಹರಿಕಾಂತರವರು ಯಾವುದೇ ಕಾಲದಲ್ಲಿಯೂ ವಾಸವಿರಲಿಲ್ಲ ಎಂದರೆ ಸರಿಯಲ್ಲ. ಅನಂತ ಗಣಪಯ್ಯ ಹರಿಕಾಂತರವರು ವಾದಿಯೊಂದಿಗೆ ಮನೆ ನಂ. 102 ರಲ್ಲಿ ವಾಸವಿದ್ದು, ಅವರೊಂದಿಗೆ ವಾಸವಿರುವಂತಹ ಸಂದರ್ಭದಲ್ಲಿಯೇ ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಅನಂತ ಗಣಪಯ್ಯ ಹರಿಕಾಂತರವರನ್ನು ಅನಾರೋಗ್ಯದ ಸಂದರ್ಭದಲ್ಲಿ ವಾದಿಯು ಉಪಚಾರ ಮಾಡಿ ಅವರನ್ನು ನೋಡಿಕೊಂಡ ಕಾರಣದಿಂದ ದಿನಾಂಕ 21-04-1989 ರಂದು ವಾದಿಯ ಪರ ಒಂದು ಮರಣಶಾಸನವನ್ನು ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ದಾವಾ ಸರ್ವೆ ನಂಬರಿನ ಉಳಿಕೆ ಕ್ಷೇತ್ರದಲ್ಲಿ 0-3-0 ಯನ್ನು ಮಂಜುನಾಥ ಅನಂತ ಹರಿಕಾಂತ ಇವರಿಗೆ ನೀಡಿದ್ದು, ಕೇವಲ 0-2-0 ಕ್ಷೇತ್ರ ಸರ್ವೆ ನಂಬರನಲ್ಲಿ ಉಳಿದಿರುತ್ತದೆ ಎಂದರೆ ಸರಿಯಲ್ಲ. ಸದರಿ 0-2-0 ಕ್ಷೇತ್ರಕ್ಕೆ ವಿಲ್‌ನಾಮೆಯ ರೀತ್ಯಾ ವಾದಿ ಹಕ್ಕುದಾರಳಾಗಿರುತ್ತಾಳೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ